**2 ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**
**ಸಾಃ ಗೋಕಾಕ**

**ಸಿ.ಸಿ.ನಂ. 3260/2018**

ನಾನು , ರೂಪಾ ಮಟ್ಟಿ,
ಬಿ.ಎಸ್ ಸಿ., ಎಲ್ಎಲ್.ಎಮ್.,
2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ಗೋಕಾಕ.

ಆರೋಪಿತರ ಹೆಸರು :1) ಪರಶುರಾಮ ಅಶೋಕ ಪುಡಲಕಟ್ಟಿ,
ವಯಸ್ಸುಃ 26 ವರ್ಷ, ಉಃ ವಿಧ್ಯಾರ್ಥಿ,

2) ಅಜೀತ @ ಯಮನಪ್ಪ ಭರಮಪ್ಪ ಕರನಿಂಗ,
ವಯಸ್ಸುಃ ವಯಸ್ಕರ,

3) ಕಾಡಪ್ಪ ಶಂಬಪ್ಪ ನಾಯಿಕ,
ವಯಸ್ಸುಃ 27 ವರ್ಷ, ಉಃ ಕೂಲಿ,

4) ಲಕ್ಷ್ಮಣ ಅಣ್ಣಪ್ಪ ಉಪ್ಪಾರ,
ವಯಸ್ಸುಃ ವಯಸ್ಕರ,

5) ರಾಜು ವಸಂತ ಕರನಿಂಗ,
ವಯಸ್ಸುಃ 43 ವರ್ಷ, ಉಃ ಚಾಲಕ,

6) ಸಂಜು ವಸಂತ ಕರನಿಂಗ,
ವಃ 45 ವರ್ಷ, ಉಃ ನಿವೃತ ಮೀಲ ನೌಕರ,

ಎಲ್ಲರೂ ಸಾಃ ಕೊಣ್ಣೂರ, ತಾಃ ಗೋಕಾಕ, ಜಿಃ ಬೆಳಗಾವಿ.

**ನಿಮ್ಮ ಮೇಲೆ ಹೊರೆಸುವ ದೋಷಾರೋಪಣೆ ಏನೆಂದರೆ,**

ಮೊದಲನೇಯದಾಗಿ, ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವ ಗೋಕಾಕ ಗ್ರಾಮೀಣ ಪೋಲಿಸ ಠಾಣಾ ವ್ಯಾಪ್ತಿಯ ಕೊಣ್ಣೂರ ಗ್ರಾಮದ ತಪಸಿಮಡ್ಡಿ ಕ್ರಾಸ ಹತ್ತಿರ ಪಿರ್ಯಾದಿ ಮತ್ತು **1** ನೇ ಆರೋಪಿತನಿಗೂ ಈ ಮೊದಲು ತಂಟೆ ಆಗಿ ಪ್ರಕರಣ ದಾಖಲಾಗಿದ್ದು, ಅದೇ ಸಿಟ್ಟಿನಿಂದ ದಿನಾಂಕಃ **22.09.2018** ರಂದು ರಾತ್ರಿ **8.30** ಗಂಟೆ ಸುಮಾರಿಗೆ ಆರೋಪಿತರೆಲ್ಲರೂ ಏಕೊದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು, ಅಕ್ರಮಕೂಟದ ಸದಸ್ಯರಾಗಿ ಬಂದು ಪಿರ್ಯಾದಿ ರವರ ಜೊತೆ ತಂಟೆ ತೆಗೆದಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 143 ಸಹಕಲಂ 149 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಎರಡನೇಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು, ಅಕ್ರಮಕೂಟದ ಸದಸ್ಯರಾಗಿ, ಸಮಾನ ಉದ್ದೇಶದಿಂದ ದೊಂಬಿ ಉಂಟು ಮಾಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 147 ಸಹಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಮೂರನೇಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು, ಅಕ್ರಮಕೂಟದ ಸದಸ್ಯರಾಗಿ, ಸಮಾನ ಉದ್ದೇಶದಿಂದ ದೊಂಬಿ ಮಾಡುವ ಉದ್ದೇಶದಿಂದ ಕೈಯಲ್ಲಿ ಬಡಿಗೆಗಳನ್ನು ಹಿಡಿದುಕೊಂಡು ಬಂದಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 148 ಸಹಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ನಾಲ್ಕನೇಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು, ಅಕ್ರಮಕೂಟದ ಸದಸ್ಯರಾಗಿ, ಸಮಾನ ಉದ್ದೇಶದಿಂದ ಪಿರ್ಯಾದಿ ರವರ ಜೊತೆ ತಂಟೆ ತೆಗೆದು, ಪಿರ್ಯಾದಿ ರವರಿಗೆ ಅಡ್ಡಗಟ್ಟಿ ಅಕ್ರಮ ತಡೆಯೊಡ್ಡಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 341 ಸಹಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಐದನೇಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು, ಅಕ್ರಮಕೂಟದ ಸದಸ್ಯರಾಗಿ, ಸಮಾನ ಉದ್ದೇಶದಿಂದ ಪಿರ್ಯಾದಿ ರವರ ಜೊತೆ ತಂಟೆ ತೆಗೆದು, 1, 3 ರಿಂದ 6ನೇ ಆರೋಪಿತರಾದ ನೀವು ಪಿರ್ಯಾದಿಯ ಶರ್ಟ ಹಿಡಿದು ಎಳೆದಾಡಿ ಕೈಯಿಂದ ಹೊಡೆದು ಸಾದಾ ಗಾಯಪಡಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 323 ಸಹಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಆರನೇಯದಾಗಿ, ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು, ಅಕ್ರಮಕೂಟದ ಸದಸ್ಯರಾಗಿ, ಸಮಾನ ಉದ್ದೇಶದಿಂದ ಪಿರ್ಯಾದಿ ರವರ ಜೊತೆ ತಂಟೆ ತೆಗೆದು, 2 ನೇ ಆರೋಪಿತನಾದ

ನೀನು ಬಡಿಗೆಯಿಂದ ಪಿರ್ಯಾದಿಗೆ ಹೊಡೆದು ಸಾದಾ ಗಾಯಪಡಿಸಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 324 ಸಹಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

(ಸದರಿ ಅಪರಾಧಗಳು ಇದೇ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದರಿಂದ ಅವು ನನ್ನಿಂದ ವಿಚಾರಣೆ ಆಗುತ್ತವೆ ಎಂದು ತಿಳಿಯಬಯಸುತ್ತೇನೆ.)

ಗೋಕಾಕ
ದಿಃ **23.06.2023** **2** ನೇ ಹೆ.ದಿ.ನ್ಯಾ.ದಂ.,ಗೋಕಾಕ.

ಪ್ರಃ 1 ನಿಮಗೆ ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉಃ

ಪ್ರಃ 2 ನೀವು ಗುನ್ಹಾ ಕಬೂಲಿ ಆಗುವಿರೋ ಅಥವಾ ವಿಚಾರಣೆ ಆಗಬೇಕೋ?

ಉಃ

(ಮೇಲಿನ ಆಪಾದನೆಯನ್ನು ಆರೋಪಿತರಿಗೆ ಓದಿ ಹೇಳಿ ಅವರಿಂದ ಬಂದ ಉತ್ತರಗಳನ್ನು ನನ್ನ ಸ್ವಅಕ್ಷರಗಳಲ್ಲಿ ಬರಕೊಂಡೆ ಅಂತಾ ದೃಢೀಕರಿಸುತ್ತೇನೆ.)

ಸ್ಥಳಃ ಗೋಕಾಕ
ದಿಃ **23.06.2023** **2** ನೇ ಹೆ.ದಿ.ನ್ಯಾ.ದಂ.,ಗೋಕಾಕ.